ರಾಜ್ಯದಲ್ಲಿರುವ ಪಟ್ಟಣಗಳಿಗೆ ಕುಡಿಯುವ ನೀರಿನ ಹಾಗೂ ಒಳಚರಂಡಿ ವ್ಯವಸ್ಥೆ

841 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿನ ಎಷ್ಟು ಪಟ್ಟಣಗಳಿಗೆ ಕುಡಿಯುವ ನೀರಿನ ಯೋಜನೆಯನ್ನು ಹಾಗೂ ಒಳಚರಂಡಿ ವ್ಯವಸ್ಥೆಯನ್ನು ಸರ್ಕಾರದವರು ಒದಗಿಸಿದ್ದಾರೆ?*

ಆ) *ಚಾಮರಾಜನಗರದ ಕುಡಿಯುವ ನೀರಿನ ಮತ್ತು ಒಳಚರಂಡಿ ಯೋಜನೆ ಯಾವಾಗ ಪೂರ್ಣಗೊಳ್ಳುವುದು ಹಾಗೂ ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು?*

ಶ್ರೀ ಬಿ.ಎನ್ ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು) :

ಅ) ರಾಜ್ಯದ ಎಲ್ಲಾ 205 ನಗರ/ಪಟ್ಟಣ ಪ್ರದೇಶಗಳಿಗೆ ಕುಡಿಯುವ ನೀರಿನ ಸೌಕರ್ಯ ಒದಗಿಸಲಾಗಿದೆ.

ರಾಜ್ಯದಲ್ಲಿ 31 ನಗರ/ಪಟ್ಟಣಗಳಿಗೆ ಒಳಚರಂಡಿ ವ್ಯವಸ್ಥೆ ಮಾಡಲಾಗಿದ್ದು ಇನ್ನೂ 6 ನಗರ/ಪಟ್ಟಣಗಳಲ್ಲಿ ಒಳಚರಂಡಿ ಯೋಜನೆಗಳು ಪ್ರಗತಿಯಲ್ಲಿದೆ.

ಆ) ಚಾಮರಾಜನಗರದ ಕುಡಿಯುವ ನೀರಿನ ಯೋಜನೆಯನ್ನು 1999ನೇ ಸಾಲಿನ ಜುಲೈ ತಿಂಗಳ ವೇಳೆಗೆ ಮುಕ್ತಾಯಗೊಳಿಸಲು ಉದ್ದೇಶಿಸಲಾಗಿದೆ. ಚಾಮರಾಜನಗರದ ಒಳಚರಂಡಿ ಯೋಜನೆಯ ಅಂದಾಜು ವೆಚ್ಚ ಹಾಲಿ ದರಪಟ್ಟಿಯ ಮೇರೆಗೆ725.00 ಲಕ್ಷ ರೂ.ಗಳಾಗುತ್ತದೆ. ಆರ್ಥಿಕ ಮಾದರಿಯ ಪ್ರಕಾರ ಚಾಮರಾಜನಗರ ನಗರಸಭೆಯವರು ತಮ್ಮ ವಂತಿಕೆಯಾದ 145.00 ಲಕ್ಷ ರೂ.ಗಳನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ಠೇವಣಿ ಮಾಡಿದ ನಂತರ ಈ ಒಳಚರಂಡಿ ಯೋಜನೆಗೆ ಸರ್ಕಾರವು ಅನುಮೋದನೆ ನೀಡಿ, ಅನಂತರ ಕೆಲಸ ಪ್ರಾರಂಭಿಸಬೇಕಿದೆ.

ರಾಜ್ಯದಲ್ಲಿರುವ ಪುರಸಭೆಗಳು ಹಾಗೂ ನಗರಸಭೆಗಳು

842 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಇರುವ ಪುರಸಭೆಗಳು ಹಾಗೂ ನಗರಸಭೆಗಳ ಒಟ್ಟು ಸಂಖ್ಯೆ ಎಷ್ಟು?*

ಆ) *1995-96 ನೇ ಸಾಲಿನಲ್ಲಿ ಪುರಸಭೆಗಳಿಗೆ ಹಾಗೂ ನಗರಸಭೆಗಳಿಗೆ ನೀಡಿರುವ ಅನುದಾನವೆಷ್ಟು?*